# ಬದುಕು ಸಿನಿ ಮಾಯೆ!

ಬದುಕಿರುವಾಗಲೇ, ಅದೂ ತನ್ನ 59ರ ಹರೆಯದಲ್ಲಿ ವ್ಯಕ್ತಿಯೊಬ್ಬ, ಒಂದು ನಾಟಕೀಯ ಸಿನಿಮಾ ಕಥೆಗೆ ತನ್ನ ಬದುಕನ್ನೇ ಒಡ್ಡಿಕೊಳ್ಳುವುದು ನಿಜಕ್ಕೂ ಕುತೂಹಲದ ಸಂಗತಿ. ಬಾಲಿವುಡ್ ನಟ ಸಂಜಯ್ ದತ್ ಈಗ ಇಂತಹ ಘಟನೆಗೆ ಒಂದು ಉದಾಹರಣೆ ಆಗಿದ್ದಾನೆ. ಹಲವು ಸೂಪರ್‌ಹಿಟ್ ಚಿತ್ರಗಳನ್ನು ನೀಡಿದರೂ ಈತನನ್ನು ಯಾರೂ 'ಬಾಲಿವುಡ್ ಬಾದ್‌ಷಾ' ಎನ್ನಲಿಲ್ಲ. ಇತರ ಯಶಸ್ವಿ ನಟರನ್ನು 'ರೋಲ್ ಮಾಡೆಲ್' ಎಂದು ಅಂದುಕೊಂಡ ಹಾಗೆ ಈತನನ್ನು ಯಾರೂ 'ರೋಲ್ ಮಾಡೆಲ್' ಅನ್ನಲಿಲ್ಲ. ಬದಲಾಗಿ 'ಅಯ್ಯೊ.. ಅವನ ಥರ ಆಗ್ಬೇಡ್ರಪ್ಪಾ..' ಎಂದು ಹಿರಿಯರು ಎಳೆಯರಿಗೆ ಬುದ್ಧಿ ಹೇಳುವಂತಿತ್ತು ಈತನ ಜೀವನ. 9ರ ಎಳವೆಯಲ್ಲೇ ಸಿಗರೇಟ್ ಶುರು. 14ರ ವಯಸ್ಸಲ್ಲಿ ಗುಂಡು. ಇನ್ನೂ 20 ದಾಟುವ ಮುನ್ನವೇ ಗಾಂಜಾ, ಹೆರಾಯಿನ್ ವ್ಯಸನ. 25ರ ತಾರುಣ್ಯದಲ್ಲಿ ಕೊಕೇನ್‌ಗೆ ದಾಸನಾದ. ಒಬ್ಬರ ನಂತರ ಒಬ್ಬರಂತೆ, ಪ್ರೀತಿಸಿದ ಮೂವರು ಬಾಲಿವುಡ್ ನಟಿಯರು, ಇವನ ಅಶಿಸ್ತಿನಿಂದಾಗಿ ಮದುವೆಗೆ ಒಪ್ಪಲಿಲ್ಲ. ಮೂವರು ನಟಿಯರ ಜತೆಗಿನ ಪ್ರೇಮ ಭಗ್ನದ ಬಳಿಕ ಎರಡು ಸಲ ಮದುವೆಯಾದ. ಆದರೆ ಅವರಿಬ್ಬರೂ ಡೈವೋರ್ಸ್ ಪಡೆದುಕೊಂಡರು. ಮಧ್ಯವಯಸ್ಸು ದಾಟುವ ಮುನ್ನವೇ 'ದೇಶದ್ರೋಹಿ' ಎಂಬ ಅಪವಾದ ಹೊತ್ತು ಜೈಲು ಸೇರಿದ. ಹೊರ ಬಂದು ಮತ್ತೆ ಹೀರೋ ಆದ. ಇಷ್ಟೆಲ್ಲ ಏರಿಳಿತಗಳನ್ನು ಕಂಡವನೊಬ್ಬನ ಬದುಕು ಸಿನಿಮಾ ಆಗದಿದ್ದರೆ ಇನ್ಯಾರ ಬದುಕು ಸಿನಿಮಾ ಆಗಬೇಕು ಹೇಳಿ?

'ಸಂಜು' ಎನ್ನುವ ಸಿನಿಮಾ ದೇಶ ವಿದೇಶಗಳಲ್ಲಿ ಹೌಸ್‌ಫುಲ್ ಕಾಣುತ್ತಿದೆ. ಬಿಡುಗಡೆಗೆ ನಾಲ್ಕು ದಿನ ಮೊದಲೇ ನಿರ್ದೇಶಕ ರಾಜ್‌ಕುಮಾರ್ ಹಿರಾನಿ, ಸಂಜಯ್‌ದತ್‌ಗೆ ಈ ಸಿನಿಮಾ ತೋರಿಸಿದರಂತೆ. ಸಿನಿಮಾ ನೋಡುತ್ತಾ ಭಾವುಕನಾದ ಸಂಜಯ್, ನಡುನಡುವೆ ಉಕ್ಕಿ ಬಂದ ದುಃಖವನ್ನು ತಡೆಯುತ್ತಾ ಹನಿಗಣ್ಣಾದನಂತೆ. ಪೂರ್ತಿ ನೋಡಿದ ಬಳಿಕ ನಿರ್ದೇಶಕರನ್ನು ತಬ್ಬಿಕೊಂಡು, 'ನನ್ನ ಜೀವನವನ್ನು ಒಮ್ಮೆ ಹಿಂತಿರುಗಿ ಅಮೂಲಾಗ್ರವಾಗಿ ನೋಡಿದಂತಾಯಿತು' ಎಂದು ಕೃತಜ್ಞತೆ ಅರ್ಪಿಸಿದನಂತೆ.

ಸಾಮಾನ್ಯವಾಗಿ 'ಸೂಪರ್‌ಸ್ಟಾರ್'ಗಳು ತಮ್ಮ ಜೀವನ ಆಧರಿಸಿದ ಸಿನಿಮಾಗೆ ಅನುಮತಿ ನೀಡುವ ಮುನ್ನ ಚಿತ್ರಕಥೆಯನ್ನು ಓದುತ್ತಾರೆ. ಸಿನಿಮಾ ತಮ್ಮ ವರ್ಚಸ್ಸಿಗೆ ಕುಂದುಂಟು ಮಾಡಬಹುದೆ ಎಂಭ ಭಯ ಇರುತ್ತದೆ. ಜೊತೆಗೇ ಬದುಕಿನ ಅವಮಾನದ ಘಟನೆಗಳನ್ನು ಸಿನಿಮಾದಲ್ಲಿ ಬಳಸಿಕೊಳ್ಳಲು ಅವಕಾಶ ಕೊಡುವುದಿಲ್ಲ. ಆದರೆ ಸಂಜಯ್ ದತ್ ವಿಭಿನ್ನ. ತನ್ನ ಜೀವನ ಆಧರಿಸಿ ನಿರ್ದೇಶಕ ಹಿರಾನಿ ಸಿನಿಮಾ ಮಾಡುತ್ತಾರೆ ಎಂದಾಗ, ಆತ ಸುಮ್ಮನಿದ್ದ. ನಿರ್ದೇಶಕರೇ ಭೇಟಿಯಾಗಿ ಚಿತ್ರಕಥೆಯ ಬಗ್ಗೆ, ಶೂಟಿಂಗ್ ಬಗ್ಗೆ ವಿವರ ನೀಡಿದಾಗ, 'ನೀವು ನಿಮ್ಮಷ್ಟಕ್ಕೆ ಸಿನಿಮಾ ಮಾಡಿಕೊಂಡು ಹೋಗಿ. ನಾನು ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ. ಶೂಟಿಂಗ್ ನೋಡುವುದೂ ಇಲ್ಲ' ಎಂದನಂತೆ! ನಿಜ, ಸಂಜಯ್ ದತ್ ನಿಜಜೀವನದಲ್ಲಿ ಎಷ್ಟೊಂದು ಅಪಮಾನಗಳನ್ನು ಎದುರಿಸಿದ್ದನೆಂದರೆ, ಯಾರೋ ಸಿನಿಮಾ ಮಾಡಿ ಆತನಿಗೆ ಇನ್ನಷ್ಟು ಅಪಮಾನ ಮಾಡುವ ಸಾಧ್ಯತೆಯೇ ಇರಲಿಲ್ಲ!

ಸುನಿಲ್ ದತ್ ಮತ್ತು ನರ್ಗಿಸ್ ಇಬ್ಬರೂ ಭಾರತೀಯ ಚಿತ್ರರಂಗ ಕಂಡ ಅಭಿನಯಶ್ರೇಷ್ಠರು. ನರ್ಗಿಸ್ ಒಂದು ಕಾಲದಲ್ಲಿ ಬಾಲಿವುಡ್ ಅನ್ನು ವಸ್ತುಶಃ ಆಳಿದ ಹೀರೋಯಿನ್. ಮೊದಲ ಮಗು ಹುಟ್ಟುವುದಕ್ಕೆ ಮುನ್ನ ಇಬ್ಬರೂ ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟು ಮಗುವಿಗೊಂದು ಹೆಸರು ಕೊಡಿ ಎಂದು ಸಾರ್ವಜನಿಕರನ್ನು ಕೇಳಿಕೊಂಡಿದ್ದರು. ಹಾಗೆ ಜನರು ಸೂಚಿಸಿದ ಹೆಸರುಗಳಲ್ಲಿ ಆಯ್ಕೆಯಾದದ್ದು ಸಂಜಯ್. ಸಿಗರೇಟ್, ನಶೆ ಎಂದು ಚಿಕ್ಕಂದಿನಲ್ಲಿಯೇ ಮಗ ಉಢಾಳನಾದದ್ದು ಕಂಡು ಸಂಸದರೂ ಆಗಿದ್ದ ತಂದೆ ಸುನಿಲ್ ದತ್, ಆಗಿನ ಪ್ರಧಾನಿ ಇಂದಿರಾ ಗಾಂಧಿಯವರಲ್ಲಿ ನೋವು ತೋಡಿಕೊಂಡಿದ್ದರು. ಇಂದಿರಾರ ಸಲಹೆಯಂತೆಯೇ ಮಗನನ್ನು ಬೋರ್ಡಿಂಗ್ ಸ್ಕೂಲಿಗೆ ಸೇರಿಸಿದರು. 9 ವರ್ಷ ಅಲ್ಲೇ ಕಲಿತ ಬಳಿಕ ಮುಂಬೈಯಲ್ಲೇ ಕಾಲೇಜಿಗೆ ಸೇರಿಸಿದರು. ಆದರೆ ಅಲ್ಲಿ ಇನ್ನಷ್ಟು ಉಢಾಳನಾದ ಮಗ, ಪೂರ್ತಿ ದಾರಿ ತಪ್ಪಿದ. ಕೊನೆಗೆ ಅವನ ಇಚ್ಛೆಯಂತೆಯೇ ಸಿನಿಮಾ ಹೀರೊ ಮಾಡಿದರು. ಸಿನಿಮಾ ಸೆಟ್‌ಗಳಲ್ಲಿ ಆತ ಪೂರ್ತಿ ನಶೆಯಲ್ಲಿ ಇರುತ್ತಿದ್ದ! ಮೊದಲ ಸಿನಿಮಾ 'ರಾಕ್ಕಿ' ಬಿಡುಗಡೆಗೆ ನಾಲ್ಕು ದಿನ ಮೊದಲೇ ನರ್ಗಿಸ್ ಇಹಲೋಕ ತ್ಯಜಿಸಿದರು.

ಕೊನೆಗೆ ಮಾದಕ ವ್ಯಸನದ ಚಿಕಿತ್ಸೆಗೆ ಅಮೆರಿಕಕ್ಕೆ ಹೋದ ಸಂಜಯ್, ವ್ಯಸನಮುಕ್ತನಾದ, ಅಲ್ಲೇ ನೆಲೆಸಲು ನಿರ್ಧರಿಸಿದ. ಆದರೆ ಅಪ್ಪನ ಒತ್ತಾಯಕ್ಕೆ ಮರಳಿ ಬಂದು ಮತ್ತೆ ಸಿನಿಮಾದಲ್ಲಿ ನಟಿಸಿದ. ಎರಡು ಸಿನಿಮಾಗಳು ಫ್ಲಾಪ್ ಆದ ಬಳಿಕ ಮಹೇಶ್‌ಭಟ್ ನಿರ್ದೇಶನದ 'ನಾಮ್' ಕೈಹಿಡಿಯಿತು. ಮುಂದಿನ ಸಿನಿಮಾಗಳು ಬಾಕ್ಸಾಫೀಸಿನಲ್ಲಿ ಗೆದ್ದು ಸೂಪರ್‌ಸ್ಟಾರ್ ಆದ. ಆದರೆ ಅಕ್ರಮ ಬಂದೂಕು ಹೊಂದಿದ್ದು, ಅದನ್ನೂ ಮುಂಬೈ ಬಾಂಬ್ ಸ್ಫೋಟದ ಆರೋಪಿಗಳಿಂದ ಪಡೆದದ್ದು ಸಂಜಯ್ ಜೀವನಕ್ಕೆ ಮುಳುವಾಯಿತು. ಆರೋಪ ಸಾಬೀತಾಗಿ ಹಲವು ವರ್ಷಗಳ ಜೈಲುವಾಸ ಮುಗಿಸಿದ ಬಳಿಕ ಸಂಜಯ್ ಈಗ ಪೂರ್ತಿ ಬದಲಾಗಿದ್ದಾನೆ. ಮತ್ತೆ ಚಿತ್ರರಂಗದಲ್ಲಿ ಸಕ್ರಿಯನಾಗಿದ್ದಾನೆ. ಮೂರನೇ ಪತ್ನಿ ಮಾನ್ಯತಾ ಗಂಡನಿಗೆ ಬೆಂಗಾವಲಾಗಿ ಬದುಕಿದ್ದಾಳೆ. ಮೊದಲ ಹೆಂಡತಿ ರಿಚಾ ಶರ್ಮಾಗೆ ಹುಟ್ಟಿದ ಮಗಳು ತ್ರಿಷಾ ಅಮೆರಿಕದಲ್ಲಿ ಸುಖವಾಗಿದ್ದಾಳೆ. ಮಾನ್ಯತಾಳಿಂದ ಪಡೆದ ಇಬ್ಬರು ಮಕ್ಕಳೀಗ ಅಪ್ಪನ ಕಣ್ಮಣಿಗಳು. ವೈರುಧ್ಯವೆಂದರೆ, ನಿಜಜೀವನದಲ್ಲಿ ಈತ ಮಾಡಿದ ತಪ್ಪುಗಳನ್ನು ಕಂಡು ಛೀ.. ಥೂ ಎಂದು ಉಗಿದಿದ್ದ ಅದೇ ಜನ ಈಗ ಬೆಳ್ಳಿತೆರೆಯ ಮೇಲೆ ಈತನ ಜೀವನ ಆಧರಿಸಿದ ಸಿನಿಮಾವನ್ನು ಆಹಾ.. ಓಹೊ.. ಎಂದು ಚಪ್ಪರಿಸಿ ನೋಡುತ್ತಿದ್ದಾರೆ. ■



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65